# ಮನ್ ಕಿ ಬಾತ್

## ಸಂಪುಟ–1



# ಮನ್ ಕಿ ಬಾತ್

## ಸಂಪುಟ–1

**Published by**
Amar Chitra Katha Pvt. Ltd

**Edition I**

ISBN : 978-81-19242-30-6

©Amar Chitra Katha Pvt. Ltd, May 2023
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.



# ಮನ್ ಕಿ ಬಾತ್

ಸಂಪುಟ–1



# The Route to your Roots

When they look back at their formative years, many Indians nostalgically recall the vital part Amar Chitra Katha comics have played in their lives. It was **Amar Chitra Katha** that first gave them a glimpse of their glorious heritage.

Since they were introduced in 1967, there are now over **500 Amar Chitra Katha** titles to choose from. **Over 100 million copies** have been sold worldwide.

Now, Amar Chitra Katha titles are even more widely available in **1000+ bookstores all across India**. If you do not have access to a bookstore near you, you can also buy all the titles through our online store, **www.amarchitrakatha.com**. We provide quick delivery anywhere in the world. To make it easy for you to locate the titles of your choice from our treasure trove of titles, the books are now arranged in six categories.

**Epics and Mythology**
Best known stories from the Epics and the Puranas

**Indian Classics**
Enchanting tales from Indian literature

**Fables and Humour**
Evergreen folktales, legends and tales of wisdom and humour

**Bravehearts**
Stirring tales of brave men and women of India

**Visionaries**
Inspiring tales of thinkers, social reformers and nation builders

**Contemporary Classics**
The best of modern Indian literature

**Illustrations and Cover Art:** Dilip Kadam

**Production:** Amar Chitra Katha

AMAR CHITRA KATHA PVT. LTD

© Amar Chitra Katha Pvt. Ltd, April 2023

Facebook: The Amar Chitra Katha Studio | Instagram: @amarchitrakatha | Twitter: @ACKComics | YouTube: Amar Chitra Katha

Get access to Amar Chitra Katha's digital library on the **ACK Comics App**. Visit **digital.amarchitrakatha.com**

You can now get ACK stories as part of your classroom with **ACK Learn**,
a unique learning platform that brings these stories to your school with a range of workshops.
Find out more at **www.acklearn.com** or write to us at **acklearn@ack-media.com**.

**ಅಕ್ಟೋಬರ್ 3, 2014ರಂದು ಪ್ರಧಾನಿ ನರೇಂದ್ರ ಮೋದಿ ಭಾರತದ ಜನತೆಗೆ ವಿಶೇಷ ಸಂಗತಿಯಿಂದನ್ನು ಪರಿಚಯಿಸಿದರು.**

ನನ್ನ ಪ್ರೀತಿಯ ಭಾರತದ ನಾಗರಿಕರೆ, ಇಂದು ವಿಜಯದಶಮಿ ಹಬ್ಬದ ಸವಿ ಘಳಿಗೆ ನನ್ನ ಕೆಲವೊಂದು ವಿಚಾರಗಳನ್ನು ನಿಮ್ಮೊಡನೆ ಹಂಚಿಕೊಳ್ಳಲು ಬಯಸುತ್ತೇನೆ. ಮತ್ತು ಈ ರೀತಿಯಾಗಿ ನಾನು ತಿಂಗಳಲ್ಲಿ ಒಮ್ಮೆ ಅಥವಾ ಎರಡು ಬಾರಿ ನಿಮ್ಮೊಂದಿಗೆ ಮಾತನಾಡಲು ಬಯಸುತ್ತೇನೆ. ಇದೀಗ ನಾನೊಂದು ಕಥೆ ಹೇಳಲು ತೊಡಗುತ್ತೇನೆ, ಇದನ್ನು ಸ್ವಾಮಿ ವಿವೇಕಾನಂದರು ಆಗಾಗ ಹೇಳುತ್ತಿದ್ದರು.



ಒಮ್ಮೆ ಸಿಂಹಿಣಿಯೊಂದು ತನ್ನೆರಡು ಮರಿಗಳೊಂದಿಗೆ ಹೊರಟಿತ್ತು. ಆಗ ಅದಲ್ಲಿ ಕುರಿಯೊಂದರ ಕೂಗು ಕೇಳಿಸುತ್ತದೆ. ಸಿಂಹಿಣಿ ತಕ್ಷಣವೇ ಕುರಿಯನ್ನು ಹಿಡಿಯಲು ರಭಸವಾಗಿ ಓಡಲು ತೊಡಗಿತು. ಆಗ ಸಿಂಹಿಣಿಯ ಒಂದು ಮರಿ ಅದನ್ನು ಹಿಂಬಾಲಿಸಿ ಓಡುತ್ತಾ ಬಂದರೆ ಇನ್ನೊಂದು ಮರಿ ಹಿಂದೆಯೇ ಉಳಿದುಕೊಂಡಿತು.

ಹಾಗೆ ಉಳಿದುಕೊಡ ಸಿಂಹಿಣಿಯ ಮರಿಯು ಕುರಿಗಳ ಗುಂಪಿನಲ್ಲಿ ಒಂದಾಗಿ ಬೆಳೆಯಿತು. ಅದು ತಾನೂ  ಇವರಲ್ಲಿ ಒಬ್ಬನೆಂದು ಭಾವಿಸಿ ಅವುಗಳಂತೆಯೇ ಮಾತು ಕಲಿಯಿತು, ಆಹಾರ ಸೇವನೆಯನ್ನೂ ಅವುಗಳಂತೆಯೇ ಮಾಡುತ್ತಾ, ಅವುಗಳೊಂದಿಗೇ ಓಡಾಡುತ್ತಾ ಅವುಗಳ ಸ್ವಭಾವವನ್ನೇ ಮೈಗೂಡಿಸಿಕೊಂಡಿತು.

ಕೆಲವು ವರ್ಷಗಳ ತರುವಾಯ ಸಿಂಹಿಣಿ ಜೊತೆಗಿದ್ದು ಬೆಳೆದ ಮರಿಯು ಕುರಿಗಳ ಮಂದೆಯೊಂದಿಗಿರುವ ತನ್ನ ಸೋದರನನ್ನು ಕಂಡಿತು. ಕುರಿಯಂತೆ ವರ್ತಿಸುವ ಸಿಂಹವನ್ನು ಕಂಡು ಅದಕ್ಕೆ ತನ್ನ ಕಣ್ಣುಗಳನ್ನು ನಂಬಲಾಗಲಿಲ್ಲ.

"ನೀನೇಕೆ ಹೀಗಿದ್ದೀಯ?"  ಸಿಂಹವು ತನ್ನ ಸೋದರನಿಗೆ ಕೇಳಿತು. "ನೀನೇಕೆ ಕುರಿಗಳ ಮಂದೆಯಲ್ಲಿದ್ದು ಅವುಗಳಂತೆಯೇ ವರ್ತಿಸುತ್ತಿರುವೆ?"

"ನಾನು ಅವರುಗಳ ಮಧ್ಯೆಯೇ ಬೆಳೆದೆ" ಇನ್ನೊಂದು ಸಿಂಹ ಉತ್ತರಿಸಿತು. "ಅವುಗಳು ನನ್ನನ್ನು ಸಾಕಿದವು, ಹಾಗಾಗಿ ನನ್ನ ಮಾತು, ನಡತೆ, ಸ್ವಭಾವಗಳೆಲ್ಲಾ ಅವುಗಳಂತೆಯೇ ಇದೆ."



"ನೀನು ನನ್ನ ಜತೆಗೆ ಬಾ, ನೀನು ನಿಜಕ್ಕೂ ಯಾರು ಎನ್ನುವುದನ್ನು ನಾನು ತೋರಿಸುತ್ತೇನೆ." ಮೊದಲ ಸಿಂಹವು ಹೇಳಿತು.

ಸಿಂಹ ತನ್ನ ಸೋದರನನ್ನು ಬಾವಿಯೊಂದರ ಬಳಿ ಕರೆದೊಯ್ದಿತು. ಅಲ್ಲಿ ಸಿಂಹದ ಪ್ರತಿಬಿಂಬವನ್ನು ತೋರಿಸಿತು.
"ನೋಡು ನೀನು ನೋಡಲು ನನ್ನ ಹಾಗೆಯೇ ಕಾಣುತ್ತಿಲ್ಲವೆ? ನೀನು ಸಿಂಹವೇ ಹೊರತು ಕುರಿ ಅಲ್ಲ."

ಕುರಿಗಳಂತೆ ವರ್ತಿಸುತ್ತಿದ್ದ ಸಿಂಹಕ್ಕೆ ಅಚ್ಚರಿಯಾಗಿತ್ತು. ಕಡೆಗೆ ಅದೊಮ್ಮೆ ಧೈರ್ಯ, ಆತ್ಮವಿಶ್ವಾಸದಿಂದೊಡಗೂಡಿ ತನ್ನ ತಲೆಯನ್ನಾಡಿಸುತ್ತಾ ನಿಜವಾದ ಸಿಂಹದಂತೆ ಘರ್ಜಿಸಿತು.

ದೇಶದಲ್ಲಿರುವ ನಾವುಗಳು ನಮ್ಮ ಸ್ವಾಭಿಮಾನ ಹಾಗೂ ಆತ್ಮವಿಶ್ವಾಸವನ್ನು ಮರಳಿ ಪಡೆಯಬೇಕು. ನಾವು ನಮ್ಮ ಶಕ್ತಿಯನ್ನು ಗುರುತಿಸಿಕೊಳ್ಳಬೇಕು. ಹಾಗೆ ಮಾಡಿದ್ದೇ ಆದಲ್ಲಿ ನಾವು ಪ್ರಗತಿಶೀಲ ಹಾಗೂ ಸಮೃದ್ಧ ರಾಷ್ಟ್ರವಾಗುತ್ತೇವೆ.


ಸಾಮಾನ್ಯ ಪ್ರಜೆಗಳಾಗಿದ್ದರೂ ಸಹ ತಮ್ಮ ಸಹವರ್ತಿಗಳಿಗೆ ಹಾಗೂ ಸಹಜೀವಿಗಳಿಗೆ ಜೀವನ ಸರಳವಾಗಿಸಲು ನಾಯಕರಂತೆ ಕೆಲಸ ಮಾಡುತ್ತಿರುವ ತಳಮಟ್ಟದ ಚಾಂಪಿಯನ್ನರ ಕಥೆಗಳನ್ನು ಪ್ರಧಾನ ಮಂತ್ರಿಗಳು ಈ ಹಲಾವರು ವರ್ಷಗಳಿಂದ ಹೇಳುತ್ತಾ ಬಂದಿದ್ದಾರೆ.
ನಾನಿಂದು ಕರ್ನಾಟಕದ ದಾಸನದೊಡ್ಡಿ ಗ್ರಾಮದವರಾದ ಕಾಮೇಗೌಡರ ಕುರಿತು ಹೇಳುತ್ತೇನೆ. ಅವರೊಬ್ಬ ಕುರಿಗಾಹಿಯಾಗಿದ್ದಾರೆ. ಅವರು ಸ್ವಯಂ 16 ಕೆರೆಗಳನ್ನು ನಿರ್ಮಿಸಿದ್ದಾರೆ. ಅದರಿಂದಾಗಿ ಇಂದು ಕಡು ಬೇಸಿಗೆಯಲ್ಲಿ ಸಹ ಜನರು, ಪ್ರಾಣಿ ಪಕ್ಷಿಗಳು ನೀರಿನ ಆಸರೆಯನ್ನು ಪಡೆದುಕೊಳ್ಳುವಂತಾಗಿದೆ.
ಸಮಾಜದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಹಲವು ಗುಂಪುಗಳನ್ನು ಅವರು ಮುನ್ನಲೆಗೆ ತಂದಿದ್ದಾರೆ.
ಯೂತ್ ಫಾರ್ ಪರಿವರ್ತನಾ ಎನ್ನುವ ಹೆಸರಿನ ತಂಡವೊಂದು ಬೆಂಗಳೂರಿನಲ್ಲಿದ್ದು ಕಳೆದ ಎಂಟು ವರ್ಷಗಳಿಂದ ಅವರು ನಗರದ ನಾನಾ ಭಾಗಗಳನ್ನು ಸ್ವಚ್ಚಗೊಳಿಸಿದ್ದು ಸುಮಾರು 350 ಪ್ರದೇಶಗಳಲ್ಲಿ ಬದಲಾವಣೆ ತಂದಿದ್ದಾರೆ. ಪ್ರಸ್ತುತ ಆ ತಂಡದಲ್ಲಿ 150 ಜನರಿದ್ದು ಅವರು ಪ್ರತೀ ಭಾನುವಾರ ಸೇರುತ್ತಾರೆ. ರಸ್ತೆ, ಗೋಡೆಗಳು, ಕಸದ ತೊಟ್ಟಿ ಮೊದಲಾದವುಗಳನ್ನು ಸ್ವಯಂ ಸ್ವಚ್ಚಗೊಳಿಸುತ್ತಾರೆ. "ದೂರುವುದನ್ನು ನಿಲ್ಲಿಸಿ ಕಾರ್ಯಾಚರಣೆ ಪ್ರಾರಂಭಿಸಿ ಎನ್ನುವುದು ಅವರ ಉದ್ದೇಶವಾಗಿದೆ.
ಪ್ರಧಾನಿಗಳು ತಮ್ಮದೇ ಆದ ಶೈಲಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಮಾಡಿದ ಅಗಾಧ ತ್ಯಾಗವನ್ನು ತನ್ನ ಕೇಳುಗರಿಗೆ ನೆನಪಿಸಿದ್ದಾರೆ.
ನಮ್ಮ ದೇಶದ 75 ರೈಲ್ವೆ ನಿಲ್ದಾಣಗಳು ಸ್ವಾತಂತ್ರ್ಯ ಹೋರಾಟದೊಂದಿಗೆ ಸಂಪರ್ಕ ಹೊಂದಿದೆ. ಎಂದು ನಿಮಗೆ ಗೊತ್ತೆ? ಇದರಲ್ಲಿ ಜಾರ್ಖಂಡ್ ನ ಗೋಮೋ ಜಂಕ್ಷನ್ ಸಹ ಒಂದು. ಇಲ್ಲಿಂದಲೇ ನೇತಾಜಿ ಸುಭಾಷ್ ಚಂದ್ರ ಬೋಸ್ ತಪ್ಪಿಸಿಕೊಂಡದ್ದು ಮತ್ತು ಜರ್ಮನಿಗೆ ತೆರಳಿದ್ದು. ಇದರಂತೆಯೇ ಉತ್ತರ ಪ್ರದೇಶದಲ್ಲಿನ ಕಾಕೋರಿ ರೈಲ್ವೆ ನಿಲ್ದಾಣವೂ ಸಹ ವಿಶೇಷವಾಗಿದೆ. ಇಲ್ಲಿಯೇ ಚಂದ್ರಶೇಖರ ಆಜಾದ್, ರಾಮ್ ಪ್ರಸಾದ್ ಬಿಸ್ಮಿಲ್ ಹಾಗೂ ಅಶ್ಫತುಲ್ಲಾ ಖಾನ್ ಬ್ರಿಟೀಷ್ ರಾಷ್ಟ್ರದಿಂದ ಬಂದಿದ್ದ ಹಣವನ್ನು ಸಾಗಿಸುತ್ತಿದ್ದ ರೈಲನ್ನು ಲೂಟಿ ಮಾಡಿದ್ದರು.
काकोरी
KAKORI
ಇನ್ನೊಂದು ಆಸಕ್ತಿದಾಯಕ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವಿಧಾ ಹಗೂ ಸೋಫಿ ಎನ್ನುವ ಸೈನ್ಯದಲ್ಲಿನ ನಾಯಿಗಳ ಕುರಿತು ಮೆಚ್ಚುಗೆ ಸೂಚಿಸಿದ್ದರು. ಆ ಎರಡು ನಾಯಿಗಳ ಕಾರ್ಯಕ್ಷಮತೆಯನ್ನು ಹೊಗಳಿದ್ದರು.
ಸೋಫಿ ವಿಶೇಷ ಗಡಿ ರಕ್ಷಣಾ ಪಡೆ
ವಿಧಾ ಉತ್ತರ ಸೈನ್ಯ
ಸೋಫಿ ಎನ್ನುವ ವಿಶೇಷ ಗಡಿ ರಕ್ಷಣಾ ಪಡೆಗೆ ಸೇರಿದ್ದ ನಾಯಿಯು ಸ್ಫೋಟಕ ಸಾಧನ ತಯಾರಿಕೆಗೆ ಬಳಸಲಾಗುವ ವಸ್ತುಗಳನ್ನು ಪತ್ತೆ ಮಾಡಬಲ್ಲದು. ಉತ್ತರದ ರಕ್ಷಣಾ ತಂಡದಲ್ಲಿದ್ದ ವಿಧಾ ಎನ್ನುವ ಸೈನ್ಯದ ನಾಯಿಯು ಇದುವರೆಗೆ ಐದು ಮದ್ದುಗುಂಡುಗಳು ಹಾಗೂ ಒಂದು ಗ್ರೆನೇಡ್ ಅನ್ನು ಪತ್ತೆ ಮಾಡುವ ಮೂಲಕ ತನ್ನ ತಂಡದವರ ಜೀವಹಾನಿಯನ್ನು ತಪ್ಪಿಸಿದೆ. ನೀವು ನಿಮ್ಮ ಮನೆಗೆ ನಾಯಿಯನ್ನು ತರಲು ಮುಂದಾದಾಗ ಭಾರತೀಯ ನಾಯಿಗಳನ್ನೇ ತೆಗೆದುಕೊಳ್ಳಿ. ಅವು ಬುದ್ಧಿವಂತ, ಬಲಿಷ್ಟವಾಗಿರುತ್ತವೆ, ಅಲ್ಲದೆ ಅವುಗಳನ್ನು ನಿಭಾಯಿಸುವುದು ಸಹ ಸುಲಭವಿದೆ. ನಾವು ಭಾರತೀಯರೆಂದು ಹೇಳಿಕೊಳ್ಳುವುದೇ ನಿಜವಾದರೆ ಇದನ್ನು ಎಲಾ ಕ್ಷೇತ್ರಗಳಲ್ಲಿ ಏಕೆ ಅನ್ವಯಿಸಬಾರದು?
ಇನ್ನು ಕೆಲವೇ ದಿನಗಳಲ್ಲಿ ಮನ್ ಕಿ ಬಾತ್ ತನ್ನ 100ನೇ ಸಂಚಿಕೆಯನ್ನು ತಲುಪಲಿದೆ. ಎಲ್ಲಾ ವರ್ಗದ ಜನರೂ ಈ ಕಾರ್ಯಕ್ರಮವನ್ನು ಆಸಕ್ತಿಯಿಂದ ಕೇಳುತ್ತಾರೆ ಹಾಗೂ ಅದರಿಂದ ಭಾರತದ ಬಗ್ಗೆ ಅಪಾರ ಮಾಹಿತಿಯನ್ನು ಪಡೆಯುತ್ತಾರೆ.

# ಪರಿವಿಡಿ


| | | |
|---|---|---|
| 1 | ಯೋಗೀಶ್ ಸೈನಿ | 6 |
| 2 | ಇಸ್ಮಾಯಿಲ್ ಖತ್ರಿ | 10 |
| 3 | ರಾಜು | 13 |
| 4 | ನಾಗುರಂಗ್ ಮೀನಾ | 16 |
| 5 | ಪೊನ್ ಮರಿಯಪ್ಪನ್ | 19 |
| 6 | ಕಲ್ಮನೆ ಕಾಮೇಗೌಡ | 21 |
| 7 | ಪ್ರದೀಪ್ ಸಂಗ್ವಾನ್ | 24 |
| 8 | ಕಾಮ್ಯಾ ಕಾರ್ತಿಕೇಯನ್ | 27 |
| 9 | ಅನ್ವಿ ಝುಂಝುರುಖಿಯಾ | 30 |

# ಯೋಗೀಶ್ ಸೈನಿ


ಇಂದಿನ ತರಗತಿಯಲ್ಲಿ ಬಹಳ ಅಚ್ಚರಿಯಾದ ಅಂಶವೊಂದು ಇದೆ.
ಇಕ್ಬಾಲ್, ನಾಯರ್ ಸರ್ ಹೇಳಿದರು, ಮುಂದಿನ ತರಗತಿಯು ಬಹಳ ವಿಶೇಷವಾಗಿರಲಿದೆಯಂತೆ! ಇಕ್ಬಾಲ್.
ಶ್ರೇಯಸ್! ಹೌದು ನಾನಂದುಕೊಳ್ಳುತ್ತೇನೆ ಇದು ಖೋ-ಖೋ, ಜಿಗಿತದಂತಹಾ ಆಟಗಳಂತೆ ನಿಜಕ್ಕೂ ಮಜವಾಗಿರಲಿದೆ,
ಇಕ್ಬಾಲ್ ತನ್ನ ಮಾತುಗಳನ್ನು ಪೂರ್ಣಗೊಳಿಸುವುದಕ್ಕೆ ಮುನ್ನ
ಶುಭೋದಯ ಮಕ್ಕಳೆ
ಶುಭೋದಯ ಸರ್!
ಸರ್ ನಾವಿಂದು ಏನನ್ನು ಮಾಡಲು ಹೊರಟಿದ್ದೇವೆ?
ನಾನು ನಿನ್ನ ಪ್ರಶ್ನೆಗೆ ಇನ್ನೊಂದು ಪ್ರಶ್ನೆಯೊಂದಿಗೆ ಉತ್ತರಿಸುವೆ, ಶ್ರೇಯಸ್ ನೀನು ಮನ್ ಕಿ ಬಾತ್ ಬಗ್ಗೆ ಕೇಳಿರುವೆಯಾ?
ಹೌದು ಸರ್, ಇದೊಂದು ರೇಡಿಯೋ ಕಾರ್ಯಕ್ರಮ. ಇದರಲ್ಲಿ ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ನಮ್ಮ (ಜನತೆಯ) ಕುರಿತು ಮಾತನಾಡುತ್ತಾರೆ ಹಾಗೇ ಚೆಂದದ ಕಥೆಗಳನ್ನು ಹೇಳುತ್ತಾರೆ.
ವೆರಿ ಗುಡ್ ವಿದ್ಯಾ! ಆದರೆ ಅವರು ಯಾವುದರ ಕುರಿತು ಮಾತನಾಡುತ್ತಾರೆ?
ಅವರು ಭಾರತದ ಕುರಿತು ಮಾತನಾಡುತ್ತಾರೆ, ಭಾರತದ ಜನರ ಕುರಿತು ಮಾತನಾಡುತ್ತಾರೆ, ಅದರಲ್ಲಿಯೂ ಯಾರು ಅಚ್ಚರಿದಾಯಕವಾದ ಕೆಲಸಗಳನ್ನು ಮಾಡುತ್ತಾ ಬಂದಿರುವರೋ ಅವರ ಕುರಿತು ಮಾತನಾಡುತ್ತಾರೆ.
ಲಕ್ಷ್ಮಿ, ನೀನು ಹೇಳಿರುವುದು ಖಂಡಿತವಾಗಿಯೂ ಸರಿಯಾಗಿದೆ.


ಇನ್ನು ಮುಂದಿನ ಕೆಲವು ವಾರ ದಿನದ ಒಂದು ತರಗತಿಯನ್ನು ಮನ್ ಕಿ ಬಾತ್‌ನಲ್ಲಿ ಪ್ರಧಾನಿಗಳು ಚರ್ಚಿಸಿದ ವಿಶೇಷ ವ್ಯಕ್ತಿಗಳ ಕುರಿತಾಗಿ ಮೀಸಲಾಗಿರಿಸಲಾಗುತ್ತದೆ. ಅಲ್ಲದೆ ಅವರು ನಮ್ಮ ದೇಶದಲ್ಲಿ ಎಂತಹಾ ಬದಲಾವಣೆ ತಂದಿದ್ದಾರೆಂಬುದನ್ನು ಗಮನಿಸಲಾಗುತ್ತದೆ. ಮೊದಲ ತರಗತಿಯಲ್ಲಿ ನಾವು ಹೇಳಹೊರಟಿರುವುದು ನಮ್ಮ ಸಮೀಪದ ನಗರದಲ್ಲೇ ವಾಸಿಸುತ್ತಿರುವ ವ್ಯಕ್ತಿಯ ಕುರಿತಾಗಿದೆ. ಅವರ ಹೆಸರು ಯೋಗೀಶ್ ಸೈನಿ.


ನಾನು ಇವರ ಬಗ್ಗೆ ಕೇಳಿದ್ದೇನೆ. ನಮ್ಮ ಶಾಲೆಗೂ ಸ್ವಲ್ಪವೇ ಮುನ್ನ ಸಿಕ್ಕುವ ಫ್ಲೈಓವರ್‌ನ ಕೆಳಗಿನ ಗೋಡೆಯಲ್ಲಿ ಅವರು ಚಿತ್ರಿಸಿರುವ ಚಿತ್ರಗಳನ್ನು ನಾನು ಪ್ರತಿದಿನವೂ ನೋಡುತ್ತೇನೆ.
ಅದು ಸತ್ಯ ಗೌರಿ, ಅವರೊಬ್ಬ ಕಲಾವಿದ. ಅವರು ನಮ್ಮ ನಗರವನ್ನು ಶುಭ್ರವಾಗಿಯೂ, ಸುಂದರವಾಗಿಯೂ ಇಡಲು ಬಯಸುತ್ತಾರೆ. ಇದೀಗ ನಾನು ನಿಮಗೆಲ್ಲಾ ಅವರ ಕಥೆಯನ್ನು ಹೇಳುವೆ.


ಯೋಗೀಶ್ ಅವರು ಅಮೆರಿಕಾದಲ್ಲಿ ಸುಮಾರು 20 ವರ್ಷಗಳು ನೆಲೆಸಿದ ಬಳಿಕ ಭಾರತಕ್ಕೆ ಹಿಂತಿರುಗಿದ್ದರು. ಅದೊಂದು ದಿನ ಅವರು ಲೋಧಿ ಉದ್ಯಾನದಲ್ಲಿ (ಲೋಧಿ ಗಾರ್ಡನ್) ವಾಕಿಂಗ್ ಹೊರಟಿದ್ದರು.
ನಾವು ಸುಂದರವಾದ ಸಾರ್ವಜನಿಕ ಸ್ಥಳಗಳನ್ನು ಹೊಂದಿದ್ದೇವೆ. ಆದರೆ ಬಹಳಷ್ಟು ಜಾಗಗಳು ಬಣ್ಣರಹಿತವಾಗಿದೆ ಅಥವಾ ಆಕರ್ಷಣಾರಹಿತವಾಗಿದೆ. ನಾನು ಈ ಪ್ರಪಂಚವನ್ನು ಹೆಚ್ಚು ಆಕರ್ಷಕ ಹಾಗೂ ವರ್ಣರಂಜಿತವಾಗಿಸಲು ಬಯಸುತ್ತೇನೆ.


ನಾನೇಕೆ ಈ ನನ್ನ ನಗರವನ್ನು ವರ್ಣರಂಜಿತವಾಗಿಸಬಾರದು? ನಾನೂ ಈ ಕಸದಿಂದ ತುಂಬಿರುವ ತೊಟ್ಟಿಗಳನ್ನು ಸುಂದರವಾದ ಬಣ್ಣಗಳಿಂದ ಕಂಗೊಳಿಸುವಂತೆ ಮಾಡುತ್ತೇನೆ. ಒಮ್ಮೆ ನಾನು ಚಿಕ್ಕದಾಗಿ ಕಾರ್ಯಕ್ರಮಗಳನ್ನು ನಡೆಸಿದ್ದಾದರೆ ಇತರರೂ ಸಹ ನನ್ನೊಂದಿಗೆ ಕೈಜೋಡಿಸಬಹುದು.


ಇದಾದ ಕೆಲವು ದಿನಗಳಲ್ಲಿ ಯೋಗೀಶ್ ದೆಹಲಿ ಮಹಾನಗರಪಾಲಿಕೆಯಿಂದ ಅನುಮತಿಯನ್ನು ಪಡೆದು "ಸ್ಟ್ರೀಟ್ ಆರ್ಟ್ ಸ್ಯಾಟರ್ಡೇ" ಎನ್ನುವ ಕಾರ್ಯಕ್ರಮ ಆಯೋಜಿಸಿದರು. ಆದರೆ..
ಇಂದಿನ ಕಾರ್ಯಕ್ರಮದಲ್ಲಿ ನಾವಿಬ್ಬರೇ ಇದ್ದಂತೆ ಕಾಣುತ್ತಿದೆ, ಏನಾದರೂ ಕೆಲಸ ಪ್ರಾರಂಭಿಸಿಯೇ ಬಿಡುವುದು.


ಕೆಲವು ಗಂಟೆಗಳ ನಂತರ
ಓಹ್! ಇದೆಷ್ಟು ಸುಂದರವಾಗಿದೆ? ಇವು ಈ ಮುನ್ನ ಸಾಧಾರಣ ಕಸದ ತೊಟ್ಟಿಗಳಾಗಿದ್ದವೆಂದು ನಂಬಲು ಸಾಧ್ಯವಾಗುತ್ತಿಲ್ಲ.
ನಾವು ಬಯಸಿದ್ದೇ ಆದರೆ ಎಂತಹಾ ಜಾಗಗಳಲ್ಲಿಯೂ ಕಲೆ ಅರಳಬಹುದು.
ನಾನೂ ನಿಮ್ಮೊಂದಿಗೆ ಸೇರಬಹುದೆ? ನನಗೆ ಕಲೆ ಎಂದರೆ ಬಹಳ ಪ್ರೀತಿ.
ART
ಅವರು ಹಾಗೆಯೇ ಮಾಡಿದರು. ಕ್ರಮೇಣ ಈ ಕೆಲಸದಲ್ಲಿ ಭಾಗವಹಿಸುವವರ ಸಂಖ್ಯೆ ಹೆಚ್ಚುತ್ತಾ ಸಾಗಿತು.
ಯೋಗೀಶ್ ಆ ಗುಂಪಿಗೆ ಡೆಲ್ಲಿ ಸ್ಟ್ರೀಟ್ ಆರ್ಟ್ ಎನ್ನುವ ಹೆಸರನ್ನು ಇಟ್ಟರು. ಈ ಗುಂಪು ನಗರದ ಚಿಕ್ಕ ಚಿಕ್ಕ ಸಾರ್ವಜನಿಕ ವಸ್ತುಗಳನ್ನು ಸುಂದರವಾಗಿ ಅಲಂಕರಿಸಲು, ಮೊದಲು ಮಾಡಿತು. ಅದೊಂದು ದಿನ..
ಬಹುಷಃ ನಾವಿನ್ನು ಗೋಡೆಗಳ ಮೇಲೆ ಭಿತ್ತಿಚಿತ್ರಗಳನ್ನು ರಚಿಸಲು ಪ್ರಾರಂಭಿಸಬಹುದು.
ನಮ್ಮೊಂದಿಗೆ ಬಹಳಷ್ಟು ಸಂಖ್ಯೆಯ ಕಲಾವಿದರು ಕೈಜೋಡಿಸಲು ಒಪ್ಪಿಕೊಂಡಿದ್ದಾರೆ. ನಾವು ರಾಜೇಂದ್ರನಗರ ಸ್ಲಂ ಪ್ರದೇಶದಿಂದ ಕೆಲಸ ಪ್ರಾರಂಭಿಸೋಣ.
ಹಾಗಾದರೆ ನಾವದನ್ನು ಮೊದಲಿಗೆ ಸ್ವಚ್ಛಗೊಳಿಸೋಣ.
ಆದರೆ ಆ ಪ್ರದೇಶ ತುಂಬಾ ಹೊಲಸಾಗಿದೆ.
ಮರುದಿನ
ನೀವೆಲ್ಲಾ ಇಲ್ಲೇನು ಮಾಡುತ್ತಿದ್ದೀರಿ?
ನಾವು ನಿಮ್ಮ ಶಾಪ್ ಹಾಗೂ ಇಲ್ಲಿನ ಮನೆಗಳನ್ನು ಸುಂದರವಾಗಿಸಲು ಹೊರಟಿದ್ದೇವೆ, ನೀವೇನೂ ಗಾಬರಿಯಾಗಬೇಕಾದ ಅಗತ್ಯವಿಲ್ಲ.
ಕೆಲವು ದಿನಗಳ ನಂತರ
ಇದೀಗ ಈ ಪ್ರದೇಶ ಸುಂದರವಾಗಿ ಕಾಣುತ್ತಿದೆಯಲ್ಲವೆ? ನಮ್ಮ ಕೆಲಸವನ್ನು ನೀನೀಗ ಒಪ್ಪಿಕೊಳ್ಳುವೆಯಾ?
ಹೌದು, ನೀವು ಹೇಳಿರುವುದು ಸರಿ, ನಮ್ಮ ಮನೆಗಳೀಗ ಅತ್ಯಂತ ಸುಂದರವಾಗಿ ಕಾಣುತ್ತಿದೆ.


ದಿನಗಳೆದಂತೆ ತನ್ನ ಉತ್ತಮ ಭಿತ್ತಿಚಿತ್ರಗಳಿಂದಾಗಿ ಡೆಲ್ಲಿ ಸ್ಟ್ರೀಟ್ ಆರ್ಟ್ ಗುಂಪು ನಗರದಾದ್ಯಂತ ಹೆಚ್ಚು ಹೆಚ್ಚು ಜನಪ್ರಿಯತೆ ಗಳಿಸಿತು.
ಮುಂದಿನ ದಿನದಲ್ಲಿ ನಾನು ಗಾಂಧೀಜಿಯ ಭಿತ್ತಿಚಿತ್ರ ಬರೆಯುವುದಕ್ಕೆ ತೊಡಗುತ್ತೇನೆ.
ಮತ್ತು ಅವರು ಹಾಗೆಯೇ ಮಾಡಿದರು. ಯೋಗೀಶ್ ಅವರ ಕೈನಿಂದ ನಗರದ ಹಲವಾರು ಭಾಗಗಳಲ್ಲಿ ರಾಷ್ಟ್ರಪಿತನ ಸುಂದರ ಭಿತ್ತಿಚಿತ್ರಗಳು ರಚನೆಯಾದವು.
ಅದೊಂದು ದಿನ
ನನಗೊಂದು ಶುಭಸಂದೇಶ ಸಿಕ್ಕಿದೆ. ಓರ್ವ ಗ್ರಾಹಕರು ಬೆಂಗಳೂರಿನಲ್ಲಿರುವ ದೊಡ್ಡ ಶಾಲೆಯೊಂದನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಾಲು ನನಗೆ ಕೇಳಿದ್ದಾರೆ.
ಇದು ನಿಜಕ್ಕೂ ಖುಷಿಯ ಸಂಗತಿ, ನಾವು ಅಲ್ಲಿರುವ ಸಮಯದಲ್ಲಿ ಅಲ್ಲಿನ ಕೆಲವು ಗೋಡೆಗಳನ್ನು ಸಹ ಭಿತ್ತಿಚಿತ್ರಗಳಿಂದ ಅಲಂಕರಿಸಬಹುದಾಗಿದೆ.
ಕಾಲಾನುಕ್ರಮದಲ್ಲಿ ಈ ತಂಡವು ಹೆಚ್ಚು ಹೆಚ್ಚು ಯೋಜನೆ (ಪ್ರಾಜೆಕ್ಟ್) ಗಳನ್ನು ಪಡೆದುಕೊಂಡಿತು. ಹಾಗೇ ದೊಡ್ಡ ಮಟ್ಟದಲ್ಲಿ ಬೆಳೆಯುತ್ತಾ ಸಾಗಿತು. ಕಳೆದ ಒಂಭತ್ತು ವರ್ಷದಲ್ಲಿ ಈ ತಂಡವು ದೇಶದ 15ರಿಂದ 20 ನಗರಗಳಲ್ಲಿ ಸ್ಲಂ, ಜೈಲುಗಳು, ಬೀದಿಗಳು, ರೈಲ್ವೆ ನಿಲ್ದಾಣಗಳು, ಶಾಲೆಗಳು ಮತ್ತಿತರೆ ಸಾರ್ವಜನಿಕ ಸ್ಥಳಗಳನ್ನು ಜೊತೆಗೆ ಖಾಸಗಿ ಜಾಗಗಳನ್ನು ತನ್ನ ಭಿತ್ತಿಚಿತ್ರಗಳೊಂದಿಗೆ ಸುಂದರವಾಗಿಸಿದೆ.
ನಮ್ಮ ಈ ಚಿಕ್ಕ ತಂಡವು ದೇಶದ ನಾನಾ ನಗರಗಳನ್ನು ಬದಲಿಸಿದೆ ಎನ್ನುವುದನ್ನು ನನಗೆ ನಂಬಲು ಸಾಧ್ಯವಾಗುತ್ತಿಲ್ಲ.
ಒಂದು ವೇಳೆ ಪ್ರತಿಯೊಬ್ಬ ನಾಗರಿಕನೂ ತನ್ನ ನಗರಕ್ಕಾಗಿ ಏನನ್ನಾದರೂ ಕೊಟ್ಟಿದ್ದಾದರೆ ನಮ್ಮ ದೇಶವೇ ಬದಲಾಗಲಿದೆ.




* ಗುಜರಾತಿನ ಭುಜ್ ಸಮೀಪದ ಒಂದು ಗ್ರಾಮ.
ಗುಜರಾತಿನಲ್ಲಿ 2001ರಲ್ಲಿ ಭೂಕಂಪ ಸಂಭವಿಸಿತ್ತು.


ಹಾಗೇ ಆಗಲಿ ನಮಗೆಲ್ಲಾ ಅನುಕೂಲಕರವಾಗಿರುವ ಜಾಗವನ್ನು ನಾನು ಇಂದಿನಿಂದಲೇ ಹುಡುಕಲು ಪ್ರಾರಂಭಿಸುವೆ.
ತನ್ನ ಸಮುದಾಯದವರ ಆಲೋಚನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಇಸ್ಮಾಯಿಲ್ ಭುಜ್ ಸಮೀಪದ ಒಂದು ಗ್ರಾಮವನ್ನು ಕಂಡುಹಿಡಿದರು, ಇದನ್ನು ಆ ನಂತರದ ದಿನಗಳಲ್ಲಿ ಅಜ್ರಖ್ ಪುರ ಎಂದು ಕರೆಯಲಾಯಿತು.
ಇಲ್ಲಿಂದ ನಮ್ಮ ಕಲೆಯು ಜಗತ್ತಿನಾದ್ಯಂತ ಪಸರಿಸುತ್ತದೆ.
ಅವರ ವ್ಯವಹಾರಕ್ಕೆ ಹೊಸ ಜಾಗದಲ್ಲಿ ಎಲ್ಲಾ ವ್ಯವಸ್ಥೆಗಳೂ ಆದವು.
ಆದರೆ ಅಲ್ಲಿ ಶೀಘ್ರವೇ ಹೊಸ ಸಮಸ್ಯೆಗಳು ತಲೆದೋರಿದವು.
ಇಂದು ನಿನ್ನ ತಂದೆ ಎಲ್ಲಿ ಹೋಗಿದ್ದಾರೆ?
ನನ್ನ ತಂದೆ ಮನೆಯಲ್ಲಿದ್ದಾರೆ, ಅವರಿಗೆ ನಿನ್ನೆ ಕೆಲಸ ಮಾಡಿದ ನಂತರ ಉಸಿರಾಟದ ತೊಂದರೆ ಕಾಣಿಸಿಕೊಂಡಿದೆ.
ರಾಸಾಯನಿಕ ಬಣ್ಣಗಳು ಕುಶಲಕರ್ಮಿಗಳಿಗೆ ಅಲರ್ಜಿ ಮತ್ತು ಅಸ್ತಮಾ ಸಮಸ್ಯೆಯನ್ನು ತಂದೊಡ್ಡುತ್ತಿದೆ, ನಾನಿದನ್ನು ಹೇಗೆ ನಿವಾರಿಸಬಹುದು?


ಸಮಸ್ಯೆಗೆ ಪರಿಹಾರ ದೊರಕಿತು, ಖತ್ರಿಗಳು ರಾಸಾಯನಿಕ ಬಣ್ಣದ ಬದಲಾಗಿ ನೈಸರ್ಗಿಕ ಬಣ್ಣಗಳನ್ನು ಬಳಸುವುದಕ್ಕೆ ತೊಡಗಿದರು.
ವಾಹ್! ಈ ಕೆಂಪು ಬಣ್ಣ ನೋಡಲು ಅದೆಷ್ಟು ಶುಭ್ರವಾಗಿದೆ?
ಇದೊಂದು ಮರದಿಂದ ತೆಗೆಯಲಾದ ಬಣ್ಣ, ಇದರಿಂದಾಗಿ ನಿನಗೆ ಯಾವ ಬಗೆಯ ಅಲರ್ಜಿಯೂ ಆಗುವುದಿಲ್ಲ.
ಈ ರೀತಿಯಾಗಿ ಅಜ್ರಕ್ ಕಲೆಯು ಓರ್ವ ವ್ಯಕ್ತಿಯ ಪ್ರಯತ್ನದಿಂದ ಆತನ ಸಮುದಾಯದ ಪರಿಶ್ರಮದಿಂದ ಬೆಳೆಯುತ್ತಾ ಸಾಗಿತು.
ಇಂದು ಅಜ್ರಕ್ ಕಲೆಗೆ ವ್ಯಾಪಕ ಬೇಡಿಕೆ ಇದೆ. ಕುಶಲಕರ್ಮಿಗಳು ಆಧುನಿಕ ಶೈಲಿಯ ವಸ್ತ್ರಗಳಲ್ಲಿ ಸಹ ನಾನಾ ಬಗೆಯ ವಿನ್ಯಾಸದ ಪ್ರಯೋಗ ನಡೆಸಿದ್ದಾರೆ.
ಅಜ್ರಕ್ ಕಲೆಯ ಬೆಳವಣಿಗೆಗೆ ಸತತ ಪ್ರೋತ್ಸಾಹ ನೀಡಿದ ಇಸ್ಮಾಯಿಲ್ ಖತ್ರಿ ಅವರಿಗೆ 2003ರಲ್ಲಿ ಲೈಸಿಸ್ಟರ್ ನ ಡಿ ಮೋಂಟ್ ಫರ್ಟ್ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿತು.
Doctor of Arts
ಪ್ರಸ್ತುತ ಇಸ್ಮಾಯಿಲ್ ಖತ್ರಿಯವರ ಮಕ್ಕಳು, ಮೊಮ್ಮಕ್ಕಳು ಅಜ್ರಕ್ ಕಲಾ ಕುಸುರಿಯ ಕೆಲವನ್ನು ಮುಂದುವರಿಸಿಕೊಂಡು ಬಂದಿದ್ದು ಅವರ ಹನ್ನೊಂದನೇ ತಲೆಮಾರು ಇದೀಗ ಅಜ್ರಕ್ ಬ್ಲಾಕ್ ಪೇಂಟಿಂಗ್ ರಚಿಸುತ್ತಾ ಜಗತ್ತಿನಾದ್ಯಂತ ಹೆಸರಾಗಿದೆ.
ಇವರ ಕೆಲಸವನ್ನು ಮೆಚ್ಚಿ ನ್ಯಾಷನಲ್ ಮೆರಿಟ್ ಸರ್ಟಿಫಿಕೇಟ್ ನೀಡಿ ಗೌರವಿಸಲಾಯಿತು ಮಾತ್ರವಲ್ಲದೆ ಯುನೆಸ್ಕೋ ಸೀಲ್ ಆಫ್ ಎಕ್ಸಲೆನ್ಸ್ ಸಹ ದೊರಕಿತು.




* ಪಂಜಾಬಿನಲ್ಲಿರುವ ಒಂದು ನಗರ


ಹತಾಶೆಗೊಂಡ ರಾಜು ಕಡೆಗೆ ಮತ್ತೇನೂ ಮಾಡಲು ತೋಚದೆ ಹೊಟ್ಟೆ ತುಂಬಿಸಿಕೊಳ್ಳಲು ಭಿಕ್ಷೆ ಬೇಡುವುದಕ್ಕೆ ಪ್ರಾರಂಭಿಸಿದನು.
ನನ್ನ ಅಣ್ಣಂದಿರಿಗೆ ಅವರದೇ ಸಂಸಾರವಿದೆ, ನಾನು ಅವರಿಗೆ ಹೊರೆಯಾಗಬಾರದು. ನಾನು ಜೀವನದಲ್ಲಿ ಸೋಲಬಾರದು.
ಸ್ವಾಮೀ ಭಿಕ್ಷೆ ನೀಡಿ, ಒಂದು ರೂ. ದಾನ ಮಾಡಿ..
ಇಗೋ ತೆಗೆದುಕೋ.
ರಾಜು ಧಂಗು ರೋಡ್‌ನಲ್ಲಿ ಪ್ರತಿನಿತ್ಯ ಭಿಕ್ಷೆ ಬೇಡುವುದಕ್ಕೆ ತೊಡಗಿದನು. ಜನರು ಇವರ ಒಳ್ಳೆಯ ನಡತೆ ನೊಡಿ ಭಿಕ್ಷೆ ನಿಡುತ್ತಿದ್ದರು.
ನನ್ನಲ್ಲಿ ಇದೀಗ ಪ್ರತಿನಿತ್ಯ 500ರಿಂದ 700 ರೂ. ಸಂಗ್ರಹವಾಗುತ್ತಿದೆ. ನನಗೆ ಅಗತ್ಯವಿರುವುದು ದಿನಕ್ಕೆ ಕೇವಲ 200 ರೂ. ಮಾತ್ರ. ಉಳಿದದ್ದನ್ನು ನಾನೇಕೆ ಇತರರ ಸಹಾಯಕ್ಕೆ ಬಳಸಬಾರದು?
ಇದರೊಂದಿಗೆ ನೆರವು ಅಗತ್ಯವಾದವರಿಗೆ ಸಹಾಯ ನೀಡುವ ರಾಜುವಿನ ಪ್ರಯಾಣ ಪ್ರಾರಂಭವಾಯಿತು.
ಬಡ ತಂದೆ ತಾಯಿಗಳು ಅವರ ಮಗಳ ವಿವಾಹ ಮಾಡಲು ನೀನು ನೆರವು ನೀಡುವುದಾಗಿ ಕೇಳಿದ್ದೇನೆ. ನನಗೂ ನೀನು ನೆರವಾಗುವೆಯಾ?
ನಿಮಗೇನು ಬೇಕಿದೆ ಕೇಳಿ, ನನ್ನ ಸಾಮರ್ಥ್ಯಕ್ಕೆ ತಕ್ಕಂತೆ ನಾನು ಸಹಾಯ ನೀಡುತ್ತೇನೆ,. ನಿಮ್ಮ ಮಗಳ ವೈವಾಹಿಕ ಜೀವನ ಉತ್ತಮವಾಗಿರಲಿ.
ರಾಜು ಆ ಕುಟುಂಬಕ್ಕೆ 1100 ರೂ. ನೆರವಿತ್ತನು. ಜೊತೆ 50 ಕೆಜಿ ಅಕ್ಕಿ ಒಂದು ಸೀಲಿಂಗ್ ಫ್ಯಾನ್ ಸಹ ನೀಡಿದನು.


ರಾಜು ಕೇವಲ ವಿವಾಹಗಳಿಗೆ ಮಾತ್ರವೇ ನೆರವಾಗುತ್ತಿರಲಿಲ್ಲ ಬದಲಾಗಿ ಅವನು ಕೊರೋನಾ ಅವಧಿಯಲ್ಲಿ ಜನರಿಗೆ 2500 ಮಾಸ್ಕ್ ಗಳನ್ನು ಸಹ ಹಂಚಿದನು.
ನಿಮ್ಮ ಮಾಸ್ಕ್ ಹಾಕಿಕೊಳ್ಳದೆ ಎಲ್ಲೂ ಹೊರಗೆ ತಿರುಗಾಡಬೇಡಿ. ಇಲ್ಲಿ ನನ್ನಿಂದ ಒಂದು ಮಾಸ್ಕ್ ತೆಗೆದುಕೊಳ್ಳಿ, ನಿಮ್ಮ ಆರೋಗ್ಯ ನೀವು ಕಾಪಾಡಿಕೊಳ್ಳಿ.
ರಾಜು, ಧನ್ಯವಾದಗಳು.


ಧಂಗು ರಸ್ತೆಯಲ್ಲಿದ್ದ ಸೇತುವೆಯು ಹಾಳಾದ ಸಮಯದಲ್ಲಿ ರಾಜು ಅದನ್ನು ದುರಸ್ತಿಗೊಳಿಸಿದನು.
ಸೇತುವೆ ದುರಸ್ತಿ ಮಾಡಿದ ಮುಖ್ಯ ವ್ಯಕ್ತಿ: ಈ ಸೇತುವೆ ದುರಸ್ತಿಗಾಗಿ ತನ್ನ ಉಳಿತಾಯದ ಹಣ 30000 ರೂ. ನೀಡಿದ ರಾಜು ಅವರಿಗೆ ನಾವು ಕೃತಜ್ಞರಾಗಿರುತ್ತೇವೆ.


ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ರಾಜುವಿನ ಕುರಿತು ಮಾತನಾಡಿದ ನಂತರ ಬಹಳಷ್ಟು ಮಂದಿ ನಿತ್ಯವೂ ರಾಜುವನ್ನು ಕಾಣಲು ಆಗಮಿಸುತ್ತಿದ್ದರು.
ರಾಜು, ನೀವು ನಮಗೆಲ್ಲಾ ಸ್ಫೂರ್ತಿಯಾಗಿದ್ದೀರಿ.
ನೀವು ನಮಗೆ ನೀಡುವ ನೆರವಿಗಾಗಿ ನಾವೆಂದೂ ನಿಮಗೆ ಆಭಾರಿಯಾಗಿರುತ್ತೇವೆ.


ಪ್ರತಿಯೊಬ್ಬರಲ್ಲಿಯೂ ಸ್ವಲ್ಪವೇ ಪ್ರಯತ್ನ ಹಾಗೂ ಸ್ವಲ್ಪ ಸಹಾನುಭೂತಿಯು ಇದ್ದದ್ದಾದರೆ ನಾವೆಲ್ಲರೂ ಇಂತಹಾ ದೊಡ್ಡ ಕೆಲಸಗಳನ್ನು ಮಾಡುವುದು ಸಾಧ್ಯವಿದೆ.




* ಸರ್ಕಾರೇತರ ಸಂಸ್ಥೆ (ನಾನ್ ಗೌರ್ನಮೆಂಟ್ ಆರ್ಗನೈಸೇಷನ್).

# ನಾಗುರಂಗ್ ಮೀನಾ




* ಮಿಜೋರಾಂನ ರಾಜಧಾನಿ, ಭಾರತದಲ್ಲೇ ಅತಿಹೆಚ್ಚು ಸಾಕ್ಷರರಿರುವ ನಗರ.


ಮೀನಾ, ಯಾರೇ ಆದರೂ ತಾವು ತೆಗೆದುಕೊಂಡು ಹೋದ ಪುಸ್ತಕವನ್ನು ಹಿಂತಿರುಗಿಸದೆ ಹೋದಲ್ಲಿ ಏನು ಮಾಡುವಿರಿ?
ಓಹ್! ಅಷ್ಟೆ ತಾನೆ? ಆ ಪುಸ್ತಕದಿಂದ ಅವರಿಗೆ ಸಹಾಯವಂತೂ ಆಗಿದೆಯಲ್ಲ, ನಾವು ಗ್ರಂಥಾಲಯ ಪ್ರಾರಂಭಿಸಿದ ಉದ್ದೇಶವೂ ಇದುವೇ ತಾನೆ?
ಓಹ್! ಇದೆಂತಹಾ ಉತ್ತಮ ಆಲೋಚನೆ?
ಮೀನಾ ಹಗೂ ದೇವಂಗ್ ಅವರ ಈ ಗ್ರಂಥಾಲಯ ನಿರ್ಮಾಣ ಯೋಜನೆಗೆ ಸ್ಥಳೀಯರಿಂದ ಅಪಾರ ನೆರವು ಸಿಕ್ಕಿತು.
ಮೀನಾ, ಇದು ನನ್ನ ಮಕ್ಕಳ ಕೆಲವು ಹಳೆಯ ಪುಸ್ತಕಗಳು, ನಾನಿದನ್ನು ನಿಮ್ಮ ಗ್ರಂಥಾಲಯಕ್ಕೆ ಕೊಡುಗೆಯಾಗಿ ನೀಡಲು ಬಯಸಿದ್ದೇನೆ.
ಧನ್ಯವಾದಗಳು ಸರ್.
ಅವರು ಗ್ರಂಥಾಲಯಕ್ಕಾಗಿ ಪುಸ್ತಕ ಕೊಳ್ಳಲು ಹಲವಾರು ಕಡೆಗಳಿಂದ ಹಣ ಹಾಗೂ ನಿಧಿ ಸಂಗ್ರಹಗಳು ಬರುವಂತಾಯಿತು.
ಓದುವ ಸಂಸ್ಕೃತಿಯು ಜನರಲ್ಲಿ ಶಿಕ್ಷಣವನ್ನು ಉತ್ತೇಜಿಸುತ್ತದೆ, ವಿದ್ಯಾರ್ಥಿಗಳು ಇನ್ನಷ್ಟು ಉತ್ತಮ ಸಾಧನೆ ಮಾಡಲು ನೆರವಾಗುತ್ತದೆ ಎಂದು ಮೀನಾ ನಂಬಿದ್ದರು.
ನನ್ನ ಪ್ರೀತಿಯ ಅರುಣಾಚಲ, ನೀನಿದರ ಕುರಿತಂತೆ ಯೋಚಿಸು. ಕೇವಲ ಸರ್ಕಾರಗಳು ಮಾತ್ರವೇ ಇಂತಹಾ ಯೋಜನೆ ತರಬೇಕೆಂದು ಕಲ್ಪಿಸಿಕೊಳ್ಳಬೇಡ. ನಾವು ನಾಗರಿಕರು, ಈ ರಾಜ್ಯದ ಪ್ರಜೆಗಳಾಗಿ ನಾವೇಕೆ ಹಿಂದುಳಿದಿದ್ದೇವೆನ್ನುವುದನ್ನು ಆಲೋಚಿಸಿ. ಹಾಗಾಗಿ ದೂರುವುದನ್ನು ನಿಲ್ಲಿಸಿ, ಏನಾದರೂ ಕೆಲಸ ಮಾಡಿ ತೋರಿಸಿ.
ಮೀನಾ ಇನ್ನಷ್ಟು ಅಂತಹಾ ಗ್ರಂಥಾಲಯಗಳ ನಿರ್ಮಾಣವಾಗಬೇಂದು ಕನಸು ಕಂಡರು. ಇವರ ಈ ಆಲೋಚನೆ ದೇಶದ ನಾನಾ ಭಾಗಗಳ ಜನರಿಗೆ ಸ್ಫೂರ್ತಿಯಾಗಿದೆ.

# ಪೊನ್ ಮರಿಯಪ್ಪನ್



ಸುಜಿತ್ ನೀನು ಈ ಬಾರಿ ಮಾಡಿಸಿಕೊಂಡಿರುವ ಕಟಿಂಗ್ ನಿಂದ ನೀನು ಹೆಚ್ಚು ಸುಂದರವಾಗಿ ಕಾಣುತ್ತಿದ್ದೀಯ.
ಸುಜಿತ್ ತಾನು ಸಿನಿಮಾ ನಟನಂತೆ ಕಾಣಿಸಬೇಕೆಂದು ಬಯಸುತ್ತಾನೆ ಸರ್.
(ನಗುತ್ತಾ) ಹ್ಹೆ.. ಹ್ಹೆ.. ಇದು ಲೇಟೆಸ್ಟ್ ಸ್ಟೈಲ್ ಸರ್!
ನೀನೇನಾದರೂ ಪೋನ್ ಮರಿಯಪ್ಪನ್ ಅವರ ಕಟಿಂಗ್ ಶಾಪ್ ಗೆ ಹೋದದ್ದಾದರೆ ಅವರು ನಿನಗೆ ಒಳ್ಳೆಯ ಕಟಿಂಗ್ ಮಾಡುತ್ತಾರೆ ಅಲ್ಲದೆ ಕೆಲವು ಪುಸ್ತಕಗಳನ್ನು ಸಹ ಓದಲು ನೀಡುತ್ತಾರೆ. ಪ್ರಧಾನ ಮಂತ್ರಿಗಳು ತಮ್ಮ ರೇಡಿಯೋ ಕಾರ್ಯಕ್ರಮದಲ್ಲಿ ಇವರ ಪ್ರಸ್ತಾಪ ಮಾಡಿದ ನಂತರ ಮರಿಯಪ್ಪನ್ ಸಾಕಷ್ಟು ಪ್ರಸಿದ್ಧಿ ಪಡೆದಿದ್ದಾರೆ.
ಪೋನ್ ಮರಿಯಪ್ಪನ್ ಮೂಲತಃ ತಮಿಳುನಾಡಿನ ತೂತುಕುಡಿಯವರು. ಅವರು ಇನ್ನೂ ಎಂಟನೇ ತರಗತಿಯಲ್ಲಿದ್ದ ಸಮಯದಲ್ಲಿ..
ಮಗೂ ನನ್ನ ಸಂಪಾದನೆ ಈ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿಲ್ಲ ಹಾಗಾಗಿ ಇನ್ನು ನೀನೂ ಸಹ ಹಣ ಸಂಪಾದನೆಯಲ್ಲಿ ತೊಡಗಿಕೊಳ್ಳಬೇಕಾಗಬಹುದು.
ನಾನು ಹಾಗೇ ಮಾಡುವೆನು, ನೀವು ಚಿಂತಿಸಬೇಡಿ.
ನನಗೆ ಓದುವುದೆಂದರೆ ಬಲು ಇಷ್ಟ, ಪುಸ್ತಕಗಳೆಂದರೆ ಪ್ರೀತಿ, ಆದರೆ ನಾನೀಗ ನನ್ನ ತಂದೆಗೆ ನೆರವಾಗಲೇಬೇಕು.
ಮರಿಯಪ್ಪನ್ ತಾನೊಂದು ಕಟಿಂಗ್ ಶಾಪ್ ತೆರೆದನು ಹಾಗೂ ಬಹು ಬೇಗನೆ ಒಳ್ಳೆಯ ಆದಾಯ ಗಳಿಸಲು ತೊಡಗಿದನು.
ಸುಶಿಕ್ಷಿತ ನರಗದ ವ್ಯಕ್ತಿಗಳನ್ನು ಕಂಡಾಗಲೆಲ್ಲಾ ನನಗೆ ನನ್ನ ಬದುಕಿನಲ್ಲೇನೋ ಕೊರತೆ ಇದೆ ಎಂದು ಆಲೋಚಿಸುವಂತಾಗುತ್ತದೆ. ನನ್ನ ಈ ಕಟಿಂಗ್ ಶಾಪ್ ಇದು ಕೇವಲ ಜನರಿಗೆ ಕೂದಲು ಕತ್ತರಿಸಿಕೊಳ್ಳಲು ಬರುವ ಸ್ಥಳವಾಗಿರಬಾರದು.




ತಿರುಕ್ಕುರಳ್ – ಇದು ತಿರುವಳ್ಳುವರ್ ರಚಿಸಿರುವ ತಮಿಳು ಭಾಷೆಯ ಮಹತ್ವದ ಕೃತಿ.

# ಕಲ್ಮನೆ ಕಾಮೇಗೌಡ


ಇದು ತರಗತಿ ನಡುವಿನ ವಿಶ್ರಾಂತಿಯ ಸಮಯ.
ಲಕ್ಷ್ಮಿ, ನೀನೇನು ಮಾಡುತ್ತಿರುವೆ?
ಇದು ಗುಬ್ಬಚ್ಚಿಗಳಿಗಾಗಿ, ಇದೀಗ ವಾತಾವರಣದಲ್ಲಿ ಬಹಳ ಬಿಸಿಲಿದ್ದು ಅವುಗಳು ಬಾಯಾರಿರುತ್ತವೆ.
ಪಾರುಲ್ ಗುಬ್ಬಚ್ಚಿಗಳಿಗಾಗಿ ನೆರವಾಗಲು ನಿರ್ಧರಿಸಿದಳು, ಕೆಲವೇ ನಿಮಿಷಗಳಲ್ಲಿ ವಿದ್ಯಾರ್ಥಿಗಳ ಸಣ್ಣ ಗುಂಪೊಂದು ಚಿಕ್ಕ ಚಿಕ್ಕ ತಟ್ಟೆಗಳಲ್ಲಿನೀರನ್ನು ಸಂಗ್ರಹಿಸಿತು.
ಇಲ್ಲೇನು ನಡೆಯುತ್ತಿದೆ?
ನಾವು ಹಕ್ಕಿಗಳಿಗಾಗಿ ನೀರನ್ನು ಇಡುತ್ತಿದ್ದೇವೆ ಸರ್.
ಈ ಬಿಸಿಲಿನಲ್ಲಿ ಹಕ್ಕಿಗಳು ಬಹಳವೇ ಬಾಯಾರಿದಂತೆ ಕಾಣುತ್ತಿದೆ, ಹಾಗಾಗಿ ನಾನು ಅವುಗಳಿಗೆ ನೆರವಾಗುವುದಕ್ಕೆ ನಿರ್ಧರಿಸಿದೆ. ಇದಕ್ಕಿಂತ ಹೆಚ್ಚಿನದನ್ನು ನಾವು ಅವುಗಳಿಗಾಗಿ ಮಾಡಲು ಸಾಧ್ಯವಿಲ್ಲ!
ಲಕ್ಷ್ಮಿ, ಇದು ಒಳ್ಳೆಯ ಉದ್ದೇಶವಾಗಿದೆ ಆದರೆ ನೀವು ಇತರೆ ಜೀವಿಗಳಿಗೆ ಇದಕ್ಕಿಂತ ಹೆಚ್ಚಿನದೇನನ್ನಾದರೂ ಮಾಡಲು ಉದ್ದೇಶಿಸಿದ್ದಾದರೆ ಇಲ್ಲಿ ಬನ್ನಿ, ಎಲ್ಲರೂ ಕುಳಿತುಕೊಳ್ಳಿ, ನಾನೀಗ ನಿಮಗೆ ಕಾಮೇಗೌಡರ ಕಥೆ ಹೇಳುತ್ತೇನೆ, ಇವರನ್ನು ಸಹ ಪ್ರಧಾನಿಗಳು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಶಂಸಿಸಿದ್ದಾರೆ.
ಕಲ್ಮನೆ ಕಾಮೇಗೌಡ ಓರ್ವ ಕುರಿಗಾಹಿ. ಇವರು ಮಂಡ್ಯ ಜಿಲ್ಲೆ ಮಳವಳ್ಳಿಯ ದಾಸನದೊಡ್ಡಿ ಗ್ರಾಮದಲ್ಲಿ ವಾಸಿಸುತ್ತಿದ್ದರು.
ಹುರ್ರ್ ಹುರ್ರ್. ಬೇಗ ಬಾ ಶಾಂತಾ, ನೀನು ಎಂದೂ ಹಿಂದೆಯೇ ಉಳಿಯುವೆಯಲ್ಲ.


ಕಾಮೇಗೌಡ ದಿನದ ಬಹುಪಾಲು ಸಮಯ ಕುರಿ ಮೇಯಿಸುವುದಕ್ಕಾಗಿ ಕಳೆಯುತ್ತಿದ್ದು ಊರಿನ ಸಮೀಪ ಕುಂದೂರು ಬೆಟ್ಟದಲ್ಲಿರುತ್ತಿದ್ದರು. ಅದೊಂದು ದಿನ..
ಇಂದು ಬಹಳ ಬಿಸಿಲಿದೆ, ಆದರೆ ಈ ಬೆಟ್ಟದಲ್ಲಿ ಕುಡಿಯಲು ಒಂದು ಹನಿ ನೀರೂ ಇಲ್ಲ.
ಅದಾದ ತಕ್ಷಣವೇ
ನೀನೂ ಸಹ ಬಹಳ ಬಳಲಿರುವಂತೆ ಕಾಣುವೆ, ನಿನಗೂ ನನ್ನ ಹಾಗೆಯೇ ಬಾಯಾರಿದೆಯೆ? ನಾನಾದರೂ ಇನ್ನು ಕೆಲ ಸಮಯಕ್ಕೆ ನನ್ನ ಕುರಿಗಳೊಂದಿಗೆ ಮನೆಗೆ ಹೋಗಿ ಅಗತ್ಯವಿರುವಷ್ಟು ನೀರನ್ನು ಕುಡಿಯುವೆ, ಆದರೆ ನೀನೇನು ಮಾಡುವೆ?
ಈ ಆಲೋಚನೆ ಕಾಮೇಗೌಡರಿಗೆ ದಿನ, ವಾರಗಟ್ಟಲೆ ತಲೆಯಲ್ಲೇ ಉಳಿದಿತ್ತು.
ನಾನಿಲ್ಲಿ ಒಂದು ದೊಡ್ಡ ಹೊಂಡವನ್ನು ಮಾಡಿ ಅದರ ತುಂಬಾ ನೀರನ್ನು ತುಂಬಿಸುವೆ. ನೀವು ಬಡ ಪ್ರಣಿಗಳು ಎಂದಿಗೂ ಬಾಯಾರಿಕೆಯಿಂದ ಸಾಯಬಾರದು.
ಆದರೆ ಅದೆಷ್ಟೇ ಗುಂಡಿಗಳಲ್ಲಿ ನೀರು ತುಂಬಿದರೂ ಕೆಲವೇ ಗಂಟೆಗಳಲ್ಲಿ ಆ ನೀರು ಒಂದೋ ಆವಿಯಾಗುತ್ತಿತ್ತು ಇಲ್ಲವೆ ಭೂಮಿಯಲ್ಲಿ ಇಂಗಿ ಹೋಗುತ್ತಿತ್ತು.
ಹೆಚ್ಚಿನ ಚರ್ಚೆಗಳಾದ ನಂತರ
ಕಮಲಾ ನನ್ನನ್ನು ಕ್ಷಮಿಸು. ನಾನು ಕೆರೆಗಳನ್ನು ನಿರ್ಮಿಸಲು ಅಗತ್ಯವಾದ ಸಲಕರಣೆ ಖರೀದಿಗಾಗಿ ನಿನ್ನನ್ನೂ ನಿನ್ನ ಸೋದರಿಯರನ್ನೂ ಮಾರಲೇಬೇಕಾಗಿದೆ, ನಿನಗೂ, ನಿನ್ನಂತಹಾ ಇತರೆ ಪ್ರಾಣಿಗಳಿಗೂ ನೆರವಾಗುವುದಕ್ಕೆ ನನಗಿರುವುದು ಇದೊಂದೇ ದಾರಿ.
ಅವರು ಶೀಘ್ರದಲ್ಲೇ ಹೆಚ್ಚು ತೇವಾಂಶವಿರುವ ಒಂದು ಜಾಗವನ್ನು ಆರಿಸಿಕೊಂಡು ಅಗೆಯಲು ತೊಡಗಿದರು. ಆದರೆ..
ಇದಾಗಲೇ ಹದಿನೈದು ದಿನಗಳಾಗಿದೆ, ಆದರೆ ಇನ್ನೂ ಸಾಕಷ್ಟು ಆಳವಾಗಿ ಅಗೆಯುವುದಕ್ಕೆ ಆಗುತ್ತಿಲ್ಲ. ಇನ್ನಷ್ಟು ಕುರಿಗಳನ್ನು ಮಾರಿ ಒಂದು ಜೆಸಿಬಿಯನ್ನು ಬಾಡಿಗೆಗೆ ಹಿಡಿಯುವುದೇ ಇದಕ್ಕೆಲ್ಲಾ ಪರಿಹಾರ.

# ಕಲ್ಮನೆ ಕಾಮೇಗೌಡ


ತಿಂಗಳುಗಳ ಕಾಲದ ಕಠಿಣ ಶ್ರಮದ ನಂತರ.
ನಾನೀಗ ಮಳೆಗಾಲಕ್ಕಾಗಿ ಕಾಯುವುದೊಂದೇ ದಾರಿ. ದೇವರು ದಯೆತೋರಿ ಮಳೆ ಚೆನ್ನಾಗಿ ಬಂದಿದ್ದಾದರೆ ಈ ಕೆರೆಯು ನೀರಿನಿಂದ ತುಂಬಿಕೊಳ್ಳಲಿದೆ.
ಇದಾದ ಕೆಲವು ಸಮಯದಲ್ಲಿ
ನಾನು ನಂಬಲಾಗುತ್ತಿಲ್ಲ! ನೀರು ಕುಡಿಯಿರಿ ಬಡಪಾಯಿ ಜೀವಿಗಳೇ, ಇದೆಲ್ಲವೂ ನಿಮಗಾಗಿಯೇ ಇದೆ.
ಮೇಕೆ, ಕುರಿ, ದನಗಳು ಮಾತ್ರವಲ್ಲದೆ ಕೆಲ ವನ್ಯಜೀವಿಗಳು ಕೂಡ ಕಾಮೇಗೌಡರು ಕಟ್ಟಿಸಿದ ಕೆರೆಯ ನೀರನ್ನು ಕುಡಿಯಲು ತೊಡಗಿದವು.
ಇದು ಪ್ರಾರಂಭ ಮಾತ್ರ. ಇದಾದ ಮುಂದಿನ ನಲವತ್ತು ವರ್ಷಗಳಲ್ಲಿ ಕಾಮೇಗೌಡ ಹದಿನೈದು ಲಕ್ಷ ಖರ್ಚು ಮಾಡಿ ಹದಿನಾರು ಕೆರೆಗಳನ್ನು ನಿರ್ಮಾಣ ಮಾಡಿದರು. ಇದು ಅವರನ್ನು ಕರ್ನಾಟಕದ ಕೆರೆಗಳ ನಿರ್ಮಾರ್ತೃ ಎಂದು ಪ್ರಸಿದ್ಧಿಯಾಗುವಂತೆ ಮಾಡಿತು. ಅದೊಂದು ದಿನ..
ನಾನು ಪತ್ರಕರ್ತನಿದ್ದೇನೆ, ನನಗೆ ನಿಮ್ಮ ಕಥೆ ಕೇಳುವ ಆಸೆಯಾಗಿದೆ. ಹೇಳಿ ಈ ಕೆರೆಗಳ ನಿರ್ಮಾಣದ ರಹಸ್ಯವೇನು?
ನೀರು ಬೆಟ್ಟಗಳ ಮೇಲಿನಿಂದ ಕೆಳಗಿಳಿದು ಬಂದು ಕೆರೆಗಳಲ್ಲಿ ತುಂಬಿಕೊಳ್ಳುತ್ತಿದೆ. ಒಮ್ಮೆ ಒಂದು ಕೆರೆ ತುಂಬಿದ್ದಾದರೆ ಮತ್ತೆ ನೀರು ಕೆಳಗಿಳಿದು ಮತ್ತೊಂದು ಕೆರೆಗೆ ಹರಿಯುತ್ತದೆ. ಈ ಕೆರೆಗಳೆಲ್ಲಾ ಒಂದಕ್ಕೊಂದು ಸಂಪರ್ಕ ಹೊಂದಿವೆ. ಹಾಗಾಗಿ ಅವು ಕಡು ಬೇಸಿಗೆಕಾಲದಲ್ಲಿ ಸಹ ಬರಿದಾಗುವುದಿಲ್ಲ.
ಕೆರೆಗಳನ್ನು ನಿರ್ಮಿಸುವುದರ ಜೊತೆಗೆ ಕಾಮೇಗೌಡರು ಸಾವಿರಾರು ಸಂಖ್ಯೆಯ ಮರಗಳನ್ನು ಸಹ ನೆಟ್ಟು ಬೆಳೆಸಿದರು. ಆಲದ ಮರಗಳನ್ನು ಹೆಚ್ಚು ಹೆಚ್ಚು ಬೆಳೆಸಿದ ಪರಿಣಾಮ ಇಡೀ ಬೆಟ್ಟಪ್ರದೇಶ ಹಸಿರಿನಿಂದ ಪರಿವರ್ತಿತವಾಗಿತ್ತು.
ಇವರ ಈ ಸೇವಾ ಕಾರ್ಯಕ್ಕೆ ಕಾಮೇಗೌಡರಿಗೆ ಬಸವಶ್ರೀ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಂತಹಾ ಅನೇಕ ಪುರಸ್ಕಾರಗಳು ಒಲಿದವು.
ಈ ಪ್ರಶಸ್ತಿಗಳಿಂದ ಬಂದ ಹಣವನ್ನು, ನಾನು ಇನ್ನಷ್ಟು ಕೆರೆಗಳ ನಿರ್ಮಾಣ ಹಾಗೂ ಮರಗಳನ್ನು ಬೆಳೆಸಲು ಬಳಸಿಕೊಳ್ಳುತ್ತೇನೆ.
ಕಾಮೇಗೌಡರು ಅಕ್ಟೋಬರ್ 2022ರಲ್ಲಿ ತಾವು ಕೊನೆಯುಸಿರೆಳೆಯುವವರೆಗೂ ಕೆರೆಗಳ ನಿರ್ಮಾಣವನ್ನು ಮುಂದುವರಿಸಿದರು. ಇವರ ಈ ಜೀವನವು ಭಾರತದಾದ್ಯಂತ ಪರಿಸರವಾದಿಗಳಿಗೆ ಸ್ಫೂರ್ತಿಯನ್ನು ನೀಡಿದೆ.

# ಪ್ರದೀಪ್ ಸಂಗ್ವಾನ್




* ಹಿಮಾಚಲ ಪ್ರದೇಶದ ಪ್ರಸಿದ್ಧ ಕೆರೆ.

ಗಡ್ಡಿ ಸಮುದಾಯವು ಹಿಮಾಚಲ ಪ್ರದೇಶದ ಸುತ್ತಮುತ್ತ ವಾಸಿಸುವ ಒಂದು ಬುಡಕಟ್ಟು ಸಮುದಾಯವಾಗಿದೆ.

# ಪ್ರದೀಪ್ ಸಂಗ್ವಾನ್




* ಜೋಗಿನಿ ಜಲಪಾತವು ಮನಾಲಿಯಲ್ಲಿನ ಪ್ರಸಿದ್ಧ ಜಲಪಾತಗಳಲ್ಲಿ ಒಂದು.


ಅವು ನಿರಾಶಾದಾಯಕ ದಿನಗಳು.
ಹಿಮಾಲಯವನ್ನು ಸ್ವಚ್ಛವಾಗಿಸುವುದಕ್ಕೆ ಇಡೀ ಜೀವನವೇ ಬೇಕಾಗುತ್ತದೆ.
ಹಾಗೆಂದು ಪ್ರದೀಪ್ ಹಗೂ ತಂಡ ತಮ್ಮ ಕೆಲಸವನ್ನು ನಿಲ್ಲಿಸಲು ತಯಾರಿರಲಿಲ್ಲ.
ನಾವು ಒಟ್ಟಾಗಿ ಕೆಲಸ ಮಾಡುವಾಗ ನಾನು ಈ ಸುರಂಗದ ಅಂತ್ಯದಲ್ಲಿ ಬೆಳಕನ್ನು ಕಂಡೆನು.
ಪ್ರದೀಪ್, ನಾನು ಇನ್ನೊಂದು ಬ್ಯಾಗ್ ತೆಗೆದುಕೊಂಡು ಹೋಗುತ್ತೇನೆ.
ಸಮುದಾಯದ ಜನರ ಸಹಕಾರ ದೊರೆತ ನಂತರ ಅವರು ದೊಡ್ಡ ಮಟ್ಟದ ಕಾರ್ಯಾಚರಣಾ ಕೇಂದ್ರಗಳನ್ನು ಹಿಮಾಲಯದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ರಾರಂಭಿಸಿದರು.
ನಾವು ಸುರಕ್ಷಿತ ಜಾಗಗಳಲ್ಲಿ ಕಸವನ್ನು ವಿಲೇವಾರಿ ಮಾಡುವುದು ಮಾತ್ರವಲ್ಲ ಇನ್ನಷ್ಟು ಹೆಚ್ಚು ಸ್ಥಳೀಯರಿಗೆ ಉದ್ಯೋಗ ನೀಡಬೇಕು.
ಪ್ರದೀಪ್ ಇನ್ನಷ್ಟು ಇಂತಹಾ ಕೇಂದ್ರಗಳನ್ನು ತೆರೆಯಲು ಯೋಜಿಸಿದರು.
ಹೀಲಿಂಗ್ ಹಿಮಾಲಯ ಸಂಘಟನೆಯು ಸಾವಿರಾರು ಮರಗಳನ್ನು ನೆಟ್ಟಿರುವುದಲ್ಲದೆ ಇಂದಿನವರೆಗೆ ಸುಮಾರು 8 ಲಕ್ಷ ಕೆಜಿ ನೈಸರ್ಗಿಕವಾಗಿ ಕರಗದ ತ್ಯಾಜ್ಯಗಳನ್ನು ತೆರವು ಮಾಡಿದೆ.
ಈ ಕೆಲಸ ಪ್ರಾರಂಭಿಸಿದ ನಂತರ ನಾನೆಂದೂ ಹಿಂತಿರುಗಿ ನೋಡಲಿಲ್ಲ. ಇಷ್ಟೆಲ್ಲಾ ಕೆಲಸ ಆಗಿದ್ದರೂ ನಾವಿಂದೂ ಸಹ ಕೇವಲ ಕೆಲವಷ್ಟು ಪ್ರಮಾಣದ ಕೆಲಸವಷ್ಟೇ ಆಗಿದೆ.




* ಲೋನವಾಳ– ಮಹಾರಾಷ್ಟ್ರದ ಮುಂಬೈ ಸಮೀಪದ ಒಂದು ಪ್ರದೇಶ.




* ಸಾಹಸ್– ಹಿ<ದೊಯಲ್ಲಿ ಧೈರ್ಯ ಎನ್ನುವ ಅರ್ಥ.

# ಕಾಮ್ಯಾ ಕಾರ್ತಿಕೇಯನ್


2022 ಸಮಯಕ್ಕೆ ಕಾಮ್ಯ ತನ್ನ ಗುರಿಯಾಗಿದ್ದ ಏಳು ಖಂಡಗಳ ಪೈಕಿ ಐದು ಖಂಡಗಳ ಎತ್ತರದ ಪರ್ವತಗಳನ್ನು ಏರಿ ಮುಗಿಸಿದ್ದಳು.
TANZANIA
ಕಿಲಿಮಂಜಾರೋ ಪರ್ವತ (ಆಫ್ರಿಕಾ)
ಎಲ್ಬ್ರಸ್ ಪರ್ವತ (ಯುರೋಪ್)
ಕೋಸ್ಸಿಯಸ್ಕೋ ಪರ್ವತ (ಆಸ್ಟ್ರೇಲಿಯಾ)
ಅಕಾಂಕಗುವಾ ಪರ್ವತ (ದಕ್ಷಿಣ ಅಮೆರಿಕಾ)
ಡೆನಾಲಿ ಪರ್ವತ (ಉತ್ತರ ಅಮೆರಿಕಾ)
ಎಲ್ಬ್ರಸ್ ಪರ್ವತ ಹಾಗೂ ಅಕಾಂಕಗುವಾ ಪರ್ವತ ಏರಿದ್ದವರ ಪೈಕಿ ಕಾಮ್ಯ ಅತಿ ಕಿರಿಯ ವಯೋಮಾನದವಳಾಗಿದ್ದಾಳೆ.
ಕಾಮ್ಯ ಅವರ ಪರ್ವತಾರೋಹಣ ಕ್ಷೇತ್ರದ ಈ ಅಪಾರ ಸಾಧನೆಗೆ ಮೆಚ್ಚಿ ಭಾರತ ಸರ್ಕಾರ ಅವರಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿ ನೀಡಿ ಗೌರವಿಸಿದೆ.
(NIC) BARAMULLA
ಪರ್ವತಗಳ ಮೇಲಿನ ಪ್ರೀತಿಯಿಂದ, ಕುಟುಂಬದ ಪ್ರೋತ್ಸಾಹದಿಂದ ಪ್ರಾರಂಭವಾಗಿದ್ದ ಕಾಮ್ಯಳ ಪರ್ವತಾರೋಹಣ ಇತಿಹಾಸ ಸೃಷ್ಟಿಗೆ ಕಾರಣವಾಯಿತು. ಕಾಮ್ಯ ಇಂದಿಗೂ ಹೆಚ್ಚು ಹೆಚ್ಚು ದಾಖಲೆಗಳನ್ನು ಮುರಿದು ದೊಡ್ಡ ದೊಡ್ಡ ಗಿರಿ ಶಿಖರಗಳನ್ನೇರುವುದನ್ನು ಮುಂದುವರಿಸಿದ್ದಾರೆ.




ಡೌನ್ ಸಿಂಡ್ರೋಮ್ ಒಂದು ವಂಶವಾಹಿಗಳಿಂದ ಬರುವ ಕಾಯಿಲೆ, ಇದರಿಂದಾಗಿ ಮಕ್ಕಳಲ್ಲಿ ದೈಹಿಕ, ಬೌದ್ಧಿಕ ಬೆಳವಣಿಗೆ ಕುಂಠಿತವಾಗುತ್ತದೆ.

^ ಮಕ್ಕಳು ಹುಟ್ಟುವ ಸಮಯದಲ್ಲೇ ಹೃದಯದ ರಚನೆಯಲ್ಲಿ ದೋಷವಿರುವ ಕಾರಣ ಹೃದಯ ಸಮಸ್ಯೆಗಳು ಎದುರಾಗುತ್ತದೆ.


ಅನ್ವಿ ಬೆಳೆಯುತ್ತಲಿರುವಾಗ ಅವಳದೇ ವಯೋಮಾನದ ಮಕ್ಕಳು ಅತ್ಯಂತ ಸುಲಭವಾಗಿ ಮಾಡುತ್ತಿದ್ದ ಕೆಲಸಗಳನ್ನು ಮಾಡಲೂ ಸಹ ಕಷ್ಟಪಡುತ್ತಿದ್ದಳು.
ಅವ್ವಿ, ಮಾತನಾಡು, ನೀನು ನನ್ನೊಡನೆ ಮಾತನಾಡಲು ಎಂದು ಪ್ರಾರಂಭಿಸುತ್ತೀಯೆ?
ಅವ್ವಿಗೆ ಹತ್ತು ವರ್ಷವಿದ್ದಾಗಅವಳ ಪೋಷಕರು ಅವಳಲ್ಲಿ ಏನೋ ವಿಶೇಷತೆಯನ್ನು ಕಂಡರು.
ನೀನದನ್ನು ನೋಡಿದೆಯಾ?
ಓಹ್! ಆಶ್ಚರ್ಯವಾಗಿದೆ.
ನೋಡು, ಅನ್ವಿಯ ದೇಹ ಎಷ್ಟು ನಾಜೂಕಾಗಿದೆ, ಹೇಗೆ ಬೇಕಾದರೂ ಹೊಂದಿಕೊಳ್ಳುತ್ತದೆ, ಬಹುಷಃ ಅವಳು ಯೋಗಾಭ್ಯಾಸ ನಡೆಸಬಹುದು.
ಓಹ್ ಇದು ಒಳ್ಳೆಯ ಆಲೋಚನೆ, ಯೋಗ ಕಲಿಯುವುದರಿಂದ ಆಕೆಯ ಆರೋಗ್ಯ ಸಹ ಸುಧಾರಿಸಬಹುದು.
ಅವನಿ ಕೋರಿಕೆಯ ಮೇರೆಗೆ ಅನ್ವಿಯ ಶಾಲೆಯಲ್ಲಿದ್ದ ನಮ್ರತಾ ಎನ್ನುವ ಯೋಗ ಶಿಕ್ಷಕಿಯು ಅವ್ವಿಗೆ ಯೋಗ ಕಲಿಸಲು ಒಪ್ಪಿದರು.
ನಿಧಾನವಾಗಿ ಬಾಗಿ ನಿನ್ನ ಕಾಲಿನ ಬೆರಳನ್ನು ಹಿಡಿದುಕೋ, ನಿನ್ನ ಮೊಣಕಾಲು ನೇರವಾಗಿರಲಿ.


ಕೆಲವು ವಾರದ ನಂತರ
ಹೇಗೆ ನಡೆಯುತ್ತಿದೆ?
ಅವ್ನಿಗೆ ಇದು ಕಷ್ಟವಾಗುತ್ತಿದೆ, ಆದರೆ ಅವಳು ನಿರಂತರ ಅಭ್ಯಾಸ ಮಾಡುತ್ತಿದ್ದಾಳೆ.
ಅನ್ವಿ ಪ್ರತಿನಿತ್ಯ ಬೆಳಿಗ್ಗೆ ಒಂದು ಗಂಟೆ, ಸಂಜೆ ಒಂದು ಗಂಟೆ ಅವಧಿ ಯೋಗಾಭ್ಯಾಸ ನಡೆಸಿದ್ದಳು. ಅದೊಂದು ದಿನ.
ಅಮ್ಮಾ..
ಅನ್ವಿ ಯೋಗ ಸ್ಪರ್ಧೆಯಲ್ಲಿ ಪ್ರಥಮ ಬಹುಮನ ಪಡೆದಿದ್ದಾಳೆ.
ನನಗ ನನ್ನ ಕಣ್ಣುಗಳನ್ನು ನಂಬಲಾಗುತ್ತಿಲ್ಲ, ನನಗೆ ಬಹಳ ಸಂತೋಷವಾಗಿದೆ.
ಇದಾಗಿ ಮುಂದಿನ ಮೂರು ವರ್ಷಗಳಲ್ಲಿ ಅನ್ವಿ 51 ಪ್ರತಿಗಳನ್ನು ಗೆದ್ದಳು, ಅದರಲ್ಲಿ 2021ರ ಡಿಸೆಂಬರ್ ನಲ್ಲಿ ನಡೆದ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿನ ಮೂರು ಚಿನ್ನ, ಎರಡು ಕಂಚಿನ ಪದಕಗಳೂ ಸೇರಿದ್ದವು.
ವಿಶೇಷ ಚೇತನ ಸಾಮರ್ಥ್ಯದ ಅತ್ಯಂತ ಸೃಜನಶೀಲ ಮಗು ಎನ್ನುವ ರಾಷ್ಟ್ರೀಯ ಪ್ರಶಸ್ತಿಯನ್ನು ಅನ್ವಿ ಝುಂಝುರುಕಿಯಾ ತಮ್ಮದಾಗಿಸಿಕೊಂಡಿದ್ದಾರೆ.
ಜನವರಿ 2022ರಲ್ಲಿ ಅನ್ವಿಗೆ ಪ್ರಧಾನ ಮಂತ್ರಿ ಬಾಲ ಪುರಸ್ಕಾರ ಲಭಿಸಿತು. ಆದರೆ ಇದಾಗಿ ಕೆಲವು ತಿಂಗಳ ನಂತರ ಪ್ರಧಾನ ಮಂತ್ರಿಗಳ ಕಚೇರಿಯಿಂದ ಪ್ರಧಾನಿ ಭೇಟಿಯಾಗಲು ಕರೆ ಬಂದ ಸಮಯದಲ್ಲಿ ಅನ್ವಿಯ ಕನಸು ನನಸಾಗಿತ್ತು.
ನೀವು ಭಾರತವನ್ನು ಹೆಮ್ಮೆ ಪಡುವಂತೆ ಮಾಡಿದ್ದೀರಿ, ನಿಮಗೆ ಉತ್ತಮ ಭವಿಷ್ಯವಿದೆ.
ಜೋರಾಗಿ ನಗುತ್ತಾ ಧನ್ಯವಾದಳು.
ಇದೀಗ ಅನ್ವಿಗೆ ಪ್ರಧಾನಿಗಳ ಜತೆಯಾಗಿ ಯೋಗ ಮಾಡಬೇಕೆನ್ನುವ ಕನಸಿದೆ.





# ಮನ್ ಕಿ ಬಾತ್

## ಸಂಪುಟ–1

ಪ್ರಧಾನಿ ನರೇಂದ್ರ ಮೋದಿಯವರು 3 ಅಕ್ಟೋಬರ್, 2014 ರಂದು ಮಾಸಿಕ ರೇಡಿಯೋ ಕಾರ್ಯಕ್ರಮ ಪ್ರಾರಂಭಿಸಿದಾಗ ಅವರು ನೇರವಾಗಿ ಜನರೊಂದಿಗೆ ಸಂಪರ್ಕ ಸಾಧಿಸಲು ವೇದಿಕೆಯೊಂದನ್ನು ಬಯಸಿದ್ದರು. ಅಲ್ಲದೆ ಆ ಕಾರ್ಯಕ್ರಮದ ಮೂಲಕ ಜನರ ಹೃದಯಕ್ಕೆ ಹತ್ತಿರವಾದ ವಿಚಾರದ ಕುರಿತು ಮಾತನಾಡುವುದು ಅವರ ಆಲೋಚನೆಯಾಗಿತ್ತು.

ಏಪ್ರಿಲ್ 2023 ರಲ್ಲಿ, ಅವರು ಈ ಕಾರ್ಯಕ್ರಮದ 100 ಸಂಚಿಕೆಗಳನ್ನು ಪೂರ್ಣಗೊಳಿಸಿದರು ಅದರ ಮೂಲಕ ಅವರು ಭಾರತದ ಸಾಮಾನ್ಯ ನಾಗರಿಕರು, ಭಾರತಕ್ಕಾಗಿ ಮಾಡಿದ ಕೆಲವು ಸ್ಫೂರ್ತಿದಾಯಕ ಕೆಲಸಗಳನ್ನು ಮುನ್ನೆಲೆಗೆ ತಂದರು. ಅಲ್ಲದೆ ಅವರು ವ್ಯಕ್ತಿಗಳು ಮತ್ತು ಸಂಸ್ಥೆಗಳ ಗಮನಾರ್ಹ ಸಾಧನೆಗಳ ಬಗೆಗೆ ಸಹ ಮಾತನಾಡಿದರು. ಅಸಹಾಯಕರು, ಬಡವರುಮತ್ತು ನಿರುತ್ಸಾಹಿಗಳಾಗಿದ್ದ ವ್ಯಕ್ತಿಗಳು ಅದೆಲ್ಲವನ್ನೂ ಹಿಂದಿಕ್ಕಿ ಹೇಗೆ ಶ್ರೇಷ್ಠತೆಯ ಹಂತಕ್ಕೇರಿದರೆಂದು ಹೇಳಲಾಗಿ ಇದು ನಮ್ಮ ಸುತ್ತಲಿನ ಇತರೆ ಜನರಲ್ಲಿ ಉತ್ಸಾಹ ಮತ್ತು ನಂಬಿಕೆ ಹುಟ್ಟಿಸಿ ಅಸಾಧ್ಯವನ್ನು ಸಾಧಿಸಲು ಅವರನ್ನು ಪ್ರೇರೇಪಿಸಿತು

ಅಮರ ಚಿತ್ರಕಥಾ ಮತ್ತು ಸಂಸ್ಕೃತಿ ಸಚಿವಾಲಯ ಜಂಟಿಯಾಗಿ ಮನ್ ಕಿ ಬಾತ್ ನಲ್ಲಿನ ಆಯ್ದ ಕಥೆಗಳ 12–ಕಾಮಿಕ್ ಸರಣಿಗಳಲ್ಲಿ ಮೊದಲನೆಯದನ್ನು ಇಲ್ಲಿ ಪ್ರಸ್ತುತಪಡಿಸುತ್ತಿದೆ.



₹90

www.amarchitrakatha.com

ISBN 978-81-19242-30-6

9 788119 242306